ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಕರ್ನಾಟಕ ಕೃಷಿ ಇಲಾಖೆ

ಸಮಗ್ರ ಕೃಷಿ ಹವಾಮಾನ ವಿಭಾಗ

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–೬೫

ಹೆಬ್ಬೂರು ಹೋಬಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: **08.11.2013**

ಈ ವಾರದ ಮುನ್ಸೂಚನೆ (ದಿನಾಂಕ **09-11-13 to 13.11.13** ವರೆಗೆ)

ನಿಯತಾಂಕಗಳು	09/11/13	10/11/13	11/11/13	12/11/13	13/11/13
ಮಳೆ (ಮಿ ಮಿ)	0	0	0	0	0
ಗರಿಷ್ಠ ಉಷ್ಣಾಂಶ(ಡಿ.ಸೆ.)	29	30	29	30	29
ಕನಿಷ್ಠ ಉಷ್ಣಾಂಶ (ಡಿ.ಸೆ.)	17	18	17	18	17
ಮೋಡ (ಪ್ರಮಾಣ)	1	2	2	2	3
ಅರ್ದ್ರತೆ ೭.೨೦ ಬೆ (ಶೇ)	77	76	75	74	73
ಅರ್ದ್ರತೆ ೨.೨೦ ಮ (ಶೇ)	54	42	44	52	45
ಗಾಳಿಯ ವೇಗ (ಕಿ.ಮಿ/ಗಂಟೆಗೆ)	4	5	4	5	6
ಗಾಳಿಯ ದಿಕ್ಕು (ಡಿಗ್ರಿ)	80	80	70	80	90

ಈ ವಾರದ ಮುನ್ಸೂಚನೆಯ ಪ್ರಕಾರ ಮುಂದಿನ ಐದು ದಿನಗಳ ಸಮೀಕ್ಷೆಯ ಪ್ರಕಾರ ಮುಂದಿನ ದಿನಗಳಲ್ಲಿ ಮಳೆಯು ಕ್ಷೀಣಿಸಿದ್ದು, ಒಣಹವೆ ಮುಂದುವರಿಯಲಿದೆ. ದಿನದ ಗರಿಷ್ಠ ಉಷ್ಣಾಂಶ 29.0-30.0^{o}C ಮತ್ತು ಕನಿಷ್ಠ 17.0-18.0 ^{o}C ಇರುವ ಸಾಧ್ಯತೆ ಇದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ 73-77 % ಇದ್ದು, ಮಧ್ಯಾಹ್ನ 42-54 % ಇರುವುದು ಮತ್ತು ಗಾಳಿಯು ನೈರುತ್ಯ ಧಿಕ್ಕಿನಿಂದ ಗಂಟೆಗೆ ಸರಾಸರಿ 4-6 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಗಾಳಿಯ ವೇಗ ಹೆಚ್ಚಾಗಿದ್ದು, ರಾಗಿ ತೆನೆಗಳು ಭೂಮಿಗೆ ಬೀಳುವ ಸಂಭವವಿರುವುದರಿಂದ ತೆನೆ ಬಂಚುಗಳನ್ನು ಸೇರಿಸಿ ಕಟ್ಟುವುದು ಉತ್ತಮ.
- ರಾಗಿಯಲ್ಲಿ ಬೆಂಕಿರೋಗವಿರುವುದು ಕಂಡುಬಂದಿದೆ ಆದ್ದರಿಂದ ರೋಗ ಬಂದಿರುವ ಕಡೆ ಬಾವಿಸ್ಟಿನ್ ಶಿಲಿಂದ್ರನಾಶಕವನ್ನು 1 ಗ್ರಾಂ ಪ್ರತಿ ಲೀ. ನೀರಿಗೆ ಬೆರೆಸಿ ಸಿಂಪಡಿಸವುದು ಒಳ್ಳೆಯದು.
- ನೆಲೆಗಡಲೆಗೆ ಬೆಳೆಯಲ್ಲಿ ಎಲೆಚುಕ್ಕೆ ರೋಗ (ಟಿಕ್ಕಾ) ಬರುವ ಲಕ್ಷಣಗಳಿರುವುದರಿಂದ ಕಾರ್ಬೆಂಡೈಜಿಮ್ ಶಿಲಿಂದ್ರನಾಶಕವನ್ನು 1 ಗ್ರಾಂ ಪ್ರತಿ ಲೀ. ನೀರಿಗೆ ಬೆರೆಸಿ ಸಿಂಪಡಿಸಲು ಸೂಚಿಸಲಾಗಿದೆ.
- ತೊಗರಿಯಲ್ಲಿ ಕಾಯಿ ಕೊರೆಯುವ ಹುಳು ಕಂಡುಬಂದಲ್ಲಿ ಲ್ಯಾನೇಟ್ (ಮಿಥೊಮಿಲ್) (1 ಗ್ರಾಂ ಪ್ರತಿ ಲೀ. ನೀರಿಗೆ ಬೆರೆಸಿ) ಸಿಂಪಡಿಸಲು ಸೂಚಿಸಲಾಗಿದೆ. ಇದಲ್ಲದೇ, ಫ್ಲಾಶ್ ಅಥವಾ ಎಕಾಲಕ್ಸ್ (2 ಮಿ.ಲೀ. ಪ್ರತಿ ಲೀ. ನೀರಿಗೆ ಬೆರೆಸಿ) ಸಿಂಪಡಿಸಲು ಸೂಚಿಸಲಾಗಿದೆ.
- ಕಟಾವಿಗೆ ಬಂದಿರುವ ನೆಲೆಗಡಲೆಗೆ ಮತ್ತು ಮೆಕ್ಕೆಜೋಳವನ್ನು ಕಟಾವು ಮಾಡಲು ಸೂಕ್ತ ಸಮಯ.
- ದನಕರುಗಳಿಗೆ ಕಾಲುಬಾಯಿ ರೋಗ ಕಂಡುಬಂದಿರುವುದರಿಂದ ಮುನ್ನೆಚ್ಚರಿಕೆ ಕ್ರಮವಹಿಸಿ ಲಸಿಕೆ ಹಾಕಿಸುವದು.
- ಗುಲಾಬಿ: ಕಪ್ಪು ಚುಕ್ಕೆ ರೋಗ: ಕಳೆಗಳನ್ನು ತೆಗೆದು ಹಾಕಿ ಹೊಲವನ್ನು ಸ್ವಚ್ಚವಾಗಿಡಿ. ಮೇಲಿಂದ ಮೇಲೆ ಹೆಚ್ಚು ನೀರು ಹಾಯಿಸಬೇಡಿ. ಸಾರಾನಕವನ್ನು ಶಿಫಾರಸ್ಸಿಗಿಂತ ಹೆಚ್ಚು ಬಳಸಬೇಡಿ. ರೋಗ ತೀವ್ರವಾಗಿದ್ದಲ್ಲಿ ಮ್ಯಾಂಕೊಜೆಬ್ (2 ಮಿ.ಲೀ/ಪ್ರತಿ ಲೀಟರ್ ನೀರಿಗೆ) ಅಥವಾ ಕವಚ್ (2 ಮಿ.ಲೀ/ಪ್ರತಿ ಲೀಟರ್ ನೀರಿಗೆ) ಅಥವಾ ಮಾಸ್ಟರ್ ಅನ್ನು ಸಿಂಪಡಿಸಿ.

ನೋಡಲ್ ಅಧಿಕಾರಿ:
ಡಾ.ಎಮ್.ಬಿ. ರಾಜೇಗೌಡ
ಬೆಂಗಳೂರು.